# ಅಷ್ಟು ಸಹನೆ ಯಾರಿಗೂ ಇರಲ್ಲ



ಕಾವ್ಯಶ್ರೀ ಗೌಡ
ಕಲರ್ಸ್ ಕನ್ನಡದ
'ಮಂಗಳಗೌರಿ'ಯ
ನಾಯಕಿ

◆ **ಮಂಗಳಗೌರಿ– ಪುಟ್ಟಗೌರಿ ಗೊಂದಲ ಆಗುತ್ತೆ ಅಂತ ಯಾರಾದರೂ ಹೇಳಿದ್ದಾರಾ?**

ಕಥೆಯ ಗೊಂದಲದ ಬಗ್ಗೆ ಈವರೆಗೆ ಯಾರೂ ಹೇಳಿಲ್ಲ. ಆದರೆ, ಅದೇ ಹಾದಿಯಲ್ಲಿ ಹೋಗುತ್ತಿದ್ದೀರಿ ಎನ್ನುತ್ತಾರೆ. ನೋಡಿದರೆ ಕಥೆ ಅವರಿಗೆ ಅರ್ಥವಾಗುತ್ತದೆ. ಅಲ್ಲಿ ಮಹೇಶನಿಗೆ ಗೌರಿ ಮೇಲೆ ಪ್ರೀತಿ ಇರಲಿಲ್ಲ. ಅವನಿಗೆ ಹೇಮಾ ಮೇಲೆ ಒಲವು ಇತ್ತು. ಇಲ್ಲಿ ರಾಜೀವನಿಗೆ ಗೌರಿ ಅಂದರೆ ಇಷ್ಟ. ಮಹೇಶ ಡಾಕ್ಟರ್ ಆಗಿದ್ದರೆ ರಾಜೀವ ಪೊಲೀಸ್ ಇದಿಷ್ಟು ವ್ಯತ್ಯಾಸ. ಇದನ್ನು ಬಿಟ್ಟರೆ ಬಹುತೇಕ ಹಳೆಯ ಕಥೆಯನ್ನೇ ಅನುಕರಿಸುತ್ತಿದ್ದೀರಿ ಎನ್ನುವ ಆಕ್ಷೇಪವನ್ನು ಕೆಲವರು ವ್ಯಕ್ತಪಡಿಸಿದ್ದಾರೆ. ಪಾತ್ರದ ಬಗ್ಗೆ ಸಿಕ್ಕಾಪಟ್ಟೆ ನೀನು ಅಳ್ತೀಯಾ ಅಷ್ಟು ಅಳಬೇಡ ಒಂದಿಷ್ಟು ಜೋರಾಗಿ ಇರು ಎಂಬ ಸಲಹೆಯನ್ನು ನೀಡುತ್ತಾರೆ.

◆ **ಕಥೆ ನಿಮಗೆ ಹೇಗೆ ಅನ್ನಿಸುತ್ತದೆ?**

ವಾಸ್ತವದಲ್ಲಿ ಯಾವ ಹುಡುಗಿಗೂ ಇಷ್ಟು ಸಹನೆ ಇದೆ ಎಂದು ನನಗೆ ಅನ್ನಿಸುವುದಿಲ್ಲ. ಒಬ್ಬ ಮಹಿಳೆಗೆ ತನ್ನ ಪತಿ ಬೇರೆ ಹೆಂಗಸಿನ ಸ್ನೇಹ ಬೆಳೆಸಿದ್ದಾನೆ ಎಂದು ಗೊತ್ತಾದರೆ, ಅವಳ ವರ್ತನೆ ಹೀಗೆಯೇ ಇರುತ್ತದೆ ಎನ್ನುವುದು ಕಲ್ಪನೆಗೂ ನಿಲುಕುವುದಿಲ್ಲ. ಮಂಗಳಗೌರಿ ತುಂಬ ಮುಗ್ಧೆ ಅತ್ಯಂತ ಸಹನಾಶೀಲ ಗುಣದವಳು. ಅವಳಿಗೆ ಯಾವ ಮಟ್ಟದ ಸಹನೆ ಇದೆ ಎಂದರೆ, ತನ್ನ ಎದುರು ಆಕೆಯ ಗಂಡ ತನ್ನ ಪ್ರೇಯಸಿ ಜೊತೆ ಚೆಲ್ಲಾಟ ಆಡಿದರೂ ಮೌನವಾಗಿಯೇ ಇರುತ್ತಾಳೆ. ನನಗೂ ಕಾಲ ಬರುತ್ತದೆ ಎಂದು ಕಾಯುತ್ತಾಳೆ. ಮಂಗಳಗೌರಿ ತಾನು ಮಾಡದ ತಪ್ಪಿಗಾಗಿ ನಿರಂತರ ಬೈಯಿಸಿಕೊಳ್ಳುತ್ತಾಳೆ. ನಾನೂ ಒಬ್ಬ ಹುಡುಗಿಯಾಗಿ ಹೇಳಬೇಕು ಅಂದರೆ ಆ ಮಟ್ಟಿನ ಸಹನಶೀಲತೆ ನನಗಂತೂ ಇಲ್ಲ. ಆದರೂ ಆ ಮುಗ್ಧತೆ ಜನರು ಇಷ್ಟ ಪಡುತ್ತಾರೆ. ಎಷ್ಟೋ ಜನ ವೀಕ್ಷಕರು ನನ್ನನ್ನು ತಮ್ಮ ಮನೆಯ ಮಗಳು ಎಂದೇ ಹೇಳುತ್ತಾರೆ. ಹೊಸತಲೆಮಾರಿನವರು ವಿರೋಧಿಸುತ್ತಾರೆ. ಈ ಕಾಲದಲ್ಲೂ ಇಂತಹ ಮೂರ್ಖ ಸಂಬಂಧ ಬೇಕಾ? ಎಂದು ಸಾಮಾಜಿಕ ಮಾಧ್ಯಮಗಳಲ್ಲಿ ಪ್ರಶ್ನಿಸುತ್ತಾರೆ. ಬುದ್ಧಿ ಇಲ್ವಾ? ಎನ್ನುತ್ತಾರೆ ನನ್ನ ತಾಯಿ ಮತ್ತು ಅವರಿಗಿಂತ ಹಿರಿಯರಿಗೆ ಇಷ್ಟ ಆಗುತ್ತದೆ. ಕೆಲವರು ಇಂತಹ ಮೂಢ ಧಾರಾವಾಹಿಯಿಂದ ಹೊರ ಬಾ ಎನ್ನುವ ಸಲಹೆಗಳನ್ನು ನೀಡಿದ್ದಾರೆ. ಇನ್ನೂ ಕೆಲವರು ಕಥೆ ಬರೆಯುವವರಿಗೂ ನಿರ್ದೇಶಕರಿಗೂ ಸೇರಿ ಬೈಯುತ್ತಾರೆ. ಎಲ್ಲರಿಗೂ ನಮ್ಮ ಪಾತ್ರ ಇಷ್ಟ ಆಗಬೇಕು ಎಂದೇನೂ ಇಲ್ಲ. ಪ್ರಶಂಸೆ– ಪ್ರತಿರೋಧ ಎರಡನ್ನೂ ಸಮಾನವಾಗಿ ತೆಗೆದುಕೊಳ್ಳಬೇಕು. ಹಾಗೆಂದು ನಾವು ಅದಕ್ಕೆ ಪ್ರತಿಕ್ರಿಯೆ ನೀಡಲು ಆಗುವುದಿಲ್ಲ. ಅದೆಲ್ಲವನ್ನೂ ಮೌನವಾಗಿ ತೆಗೆದುಕೊಳ್ಳಬೇಕು. ಪಾತ್ರವಾಗಿ ಮುಗ್ಧತೆ ಇಷ್ಟ ಆಗುತ್ತದೆ. ವೈಚಾರಿಕವಾಗಿ ಮೌಢ್ಯ ನನಗೆ ಇಷ್ಟ ಆಗಲ್ಲ.

◆ **ಸಾಮಾಜಿಕ ಮಾಧ್ಯಮಗಳನ್ನು ಹೇಗೆ ನಿರ್ವಹಣೆ ಮಾಡುತ್ತೀರಿ?**

ದಿನವೂ ವೀಕ್ಷಕರ ಅಭಿಪ್ರಾಯ ಸಿಕ್ಕಾಪಟ್ಟೆ ವ್ಯಕ್ತವಾಗುತ್ತಿರುತ್ತವೆ. ನಾನೂ ನಿತ್ಯವೂ ಹತ್ತು ಮಂದಿಗಾದರೂ ಉತ್ತರಿಸುತ್ತೇನೆ. ಕಮೆಂಟ್‌ನಲ್ಲೂ ಪ್ರತಿಕ್ರಿಯೆ ನೀಡುತ್ತೇನೆ. ಇನ್‌ಬಾಕ್ಸ್‌ಗೆ ಬರುವ ಸಂದೇಶಗಳಿಗೆಲ್ಲ ಉತ್ತರಿಸಲು ಹೋಗುವುದಿಲ್ಲ. ಧಾರಾವಾಹಿಗೆ ಸಂಬಂಧಿಸಿದಂತೆ ಏನೇ ಕೇಳಿದರೂ ನನಗೆ ಗೊತ್ತಿದ್ದಿದ್ದನ್ನು ಹೇಳುತ್ತೇನೆ. ಕೆಲವರು ಮುಂದೆ ಕಥೆ ಏನಾಗುತ್ತದೆ ಎಂದು ಕೇಳುತ್ತಾರೆ. ಧಾರಾವಾಹಿ ನೋಡಿ, ನನಗೂ ಗೊತ್ತಿಲ್ಲ. ಇವತ್ತು ಏನು ಬಂದಿದೆಯೋ ಅಲ್ಲಿತನಕ ನಟಿಸಿದ್ದೇನೆ ಎಂದು ತಪ್ಪಿಸಿಕೊಳ್ಳುತ್ತೇನೆ. ಅದು ಸತ್ಯ ಕೂಡ ಹೌದು. ಒಂದು ಲೈನ್ ಗೊತ್ತಿರುತ್ತದೆ ಅಷ್ಟೇ. ವೀಕ್ಷಕರ ಪ್ರೀತಿ ದೊಡ್ಡದು, ಅವರಿಗೆ ಸಮಾಧಾನದ ಉತ್ತರ ಕೊಡುವುದು ನನ್ನ ಕರ್ತವ್ಯ ಎಂದು ನಾನು ಭಾವಿಸಿದ್ದೇನೆ.

◆ **ನಿಮಗೆ ಎಂತಹ ಪಾತ್ರಗಳು ಇಷ್ಟ ಆಗುತ್ತವೆ?**

ರೊಮ್ಯಾಟಿಂಕ್ ಇಷ್ಟ ಆಗಲ್ಲ. ಅಳುಮುಂಜಿ ಕಥೆಯೂ ಇಷ್ಟ ಆಗಲ್ಲ. ಸಮಾಜಕ್ಕೆ ಏನಾದರೂ ಸಂದೇಶ ನೀಡುವಂತಹ ಸಂದರ್ಭದಲ್ಲಿ ಮೈಮರೆತು ಬಿಡುತ್ತೇನೆ. ತತ್ವಜ್ಞಾನಿಯಂತಾಗಿ ಬಿಡುತ್ತೇನೆ. ನಾವು ಪಾತ್ರದಲ್ಲಿ ತೊಡಗಿದರೆ ಮಾತ್ರ ಅಭಿನಯ ಮಾಡಲು ಸಾಧ್ಯ. ಪ್ರತಿ ಕ್ಷಣ ಕೂಡ ಪಾತ್ರವಾಗಿ ಇರಬೇಕಾಗುತ್ತದೆ. ಸೆಟ್‌ನಿಂದ ಆಚೆ ಬಂದಾಗ ಕೂಡ ಪಾತ್ರದಲ್ಲಿ ಮುಳುಗಿ ಹೋಗಿರುತ್ತೇನೆ. ನಾನು ತುಂಬ ಮಾತನಾಡುವ ಹುಡುಗಿ. ಇತ್ತೀಚೆಗೆ ಹೆಚ್ಚು ಮೌನವಾಗಿರುತ್ತೇನೆ. ಮುಂದಿನ ತಯಾರಿ ಬಗ್ಗೆ ಯೋಚನೆ ಮಾಡುತ್ತಿರುತ್ತೇನೆ. ಬದಲಾವಣೆ ಏನೂ ಬೇಕಾಗುತ್ತದೆ ಎನ್ನುವುದರಲ್ಲಿ ಕಳೆದು ಹೋಗಿರುತ್ತೇನೆ. ಸ್ನೇಹಿತರು ಪಾತ್ರದಿಂದ ಮೊದಲು ಹೊರ ಬಾರಮ್ಮ ಎಂದು ಹೇಳುತ್ತಾರೆ. ಎಂತಹ ಪಾತ್ರವಾದರೂ ಹೊಸತನದಿಂದ ಕೂಡಿರಬೇಕು. ಸಿನಿಮಾಗಳಿಗೆ ಅವಕಾಶಗಳು ಬರುತ್ತಿವೆ. ಅವು ಬರೀ ಗೌರಿ ಪಾತ್ರದಂತಹ ಅಳುಮುಂಜಿ ಪಾತ್ರವೇ ಆಗಿರುವುದರಿಂದ ನಿರಾಕರಿಸಿದ್ದೇನೆ.

◆ **ಒಂದು ವೇಳೆ ನಟಿ ಆಗದೆ ಇದ್ದರೆ ಏನು ಮಾಡ್ತಿದ್ರಿ?**

ಪತ್ರಿಕೋದ್ಯಮ ಓದಿದ್ದರಿಂದ ಯಾವುದಾರೂ ಟೀವಿಯಲ್ಲಿ ಈಗ ನಿರೂಪಕಿ ಆಗಿರುತ್ತಿದ್ದೆ. ನಟಿಯಾಗುವ ಪೂರ್ವದಲ್ಲಿ ಸ್ಥಳೀಯ ಖಾಸಗಿ ವಾಹಿನಿಯಲ್ಲಿ ಸುದ್ದಿ ವಾಚನವನ್ನು ಮಾಡುತ್ತಿದ್ದೆ. ಅದಕ್ಕೂ ಮುನ್ನ ಕಾಪಿ ಡೆಸ್ಕ್‌ನಲ್ಲಿಯೂ ಕೆಲಸ ಮಾಡಿದ್ದೇನೆ. ಅದನ್ನೇ ಮುಂದುವರಿಸುತ್ತಿದ್ದೆ. ಈಗ ಒಳ್ಳೆಯ ಅವಕಾಶ ಸಿಕ್ಕಿದೆ. ನಾನು ಪತ್ರಕರ್ತೆ ಆಗಿದ್ದರೆ ಈ ರೀತಿಯ ಜನಮನ್ನಣೆ ಸಿಗ್ತಾ ಇರಲಿಲ್ಲ. ಮಾಧ್ಯಮದಲ್ಲಿ ಕೆಲಸ ಮಾಡಬೇಕು ಎನ್ನುವ ಕಾರಣಕ್ಕೆ ಪತ್ರಿಕೋದ್ಯಮ ಮಾಡಿದ್ದೆ. ಈಗ ಬೇರೆ ಕೆಲಸ ಇಷ್ಟ ಆಗಲ್ಲ.

■ **ರಾಘವೇಂದ್ರ ಕೆ.**